
ಡಾ. ಮಾರ್ಟಿನ್ ಲೂಥರ್ ಕಿಂಗ್, ಜೂನಿಯರ್.

ಲೇಖಕ: ಡೇವಿಡ್ ಎ. ಆಡ್ಲರ್

ವಿವರಣೆ: ಕಾಲಿನ್ ಬೂಟ್‌ಮನ್



ಡಾ. ಮಾರ್ಟಿನ್ ಲೂಥರ್ ಕಿಂಗ, ಜೂನಿಯರ್.

ಲೇಖಕ: ಡೇವಿಡ್ ಎ. ಆಡ್ಲರ್

ವಿವರಣೆ: ಕಾಲಿನ್ ಬೂಟ್‌ಮನ್



ಸೂಚ್ಯಂಕ

1. ಯುವ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್.

ಮಾರ್ಟಿನ್ ಲೂಥರ್ ಕಿಂಗ್ 1929 ರಲ್ಲಿ ಅಟ್ಲಾಂಟಾ, ಜಾರ್ಜಿಯಾದಲ್ಲಿ ಜನಿಸಿದರು. ಅವರ ತಂದೆ ಒಬ್ಬ ಪಾದ್ರಿಯಾಗಿದ್ದರು. ಅವರ ತಾಯಿ ಒಬ್ಬ ಶಿಕ್ಷಕಿ.

ಮಾರ್ಟಿನ್ ಅವನ ವಾಸ್ತವಿಕತೆಯನ್ನು ಬಹಳ ಬೇಗ ತಿಳಿದುಕೊಂಡ , ಅವನು ಆಫ್ರಿಕನ್-ಅಮೇರಿಕನ್ ಆಗಿದ್ದರಿಂದ, ಅವನ ಚರ್ಮವು ಕಪ್ಪು ಬಣ್ಣದ್ದಾಗಿದ್ದರಿಂದ, ಅವನಿಗೆ ಅನೇಕ ಸ್ಥಳಗಳು ನಿಷೇಸಿದಲಾಗಿತ್ತು.




ಅಟ್ಲಾಂಟಾ ಮತ್ತು ಅನೇಕ ಇತರ ಸ್ಥಳಗಳಲ್ಲಿ "ಬಿಳಿಯರಿಗೆ ಮಾತ್ರ" ಎಂಬ ಫಲಕಗಳಿದ್ದವು.

ಅನೇಕ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ರೈಲುಗಳು, ಉದ್ಯಾನವನಗಳು, ಈಜುಕೊಳಗಳು ಮತ್ತು ಶಾಲೆಗಳು ಆಫ್ರಿಕನ್-ಅಮೆರಿಕನ್ನರಿಗೆ ಬಹಿಷ್ಕೃತವಾಗಿತ್ತು.

ಅನೇಕ ನಗರಗಳಲ್ಲಿ ಕಪ್ಪು ಜನರಿಗೆ ಬಸ್ಸುಗಳಲ್ಲಿ ಪ್ರಯಾಣಿಸುವಾಗ ಹಿಂದಿನ ಸೀಟುಗಳಲ್ಲಿ ಮಾತ್ರ ಕುಳಿತುಕೊಳ್ಳುವ ಅನುಮತಿಯಿತ್ತು.

ಸಿನಿಮಾ ಮಂದಿರಗಳಲ್ಲಿ ಬಾಲ್ಕನಿಯಲ್ಲಿ ಮಾತ್ರ ಕುಳಿತುಕೊಳ್ಳಬಹುದಾಗಿತ್ತು.

ಆಫ್ರಿಕನ್-ಅಮೆರಿಕನ್ ರು ಬಿಳಿಯರ ಮನೆಗಳನ್ನು ಹಿಂದಿನ ಬಾಗಿಲನಿಂಧ ಮಾತ್ರ ಪ್ರವೇಶ ಮಾಡಬಹುದಿತ್ತು





ಮಾರ್ಟಿನ್ ಆರು ವರ್ಷದವನಿದ್ದಾಗ, ಅವನ ಇಬ್ಬರು ಸ್ನೇಹಿತರು ಇನ್ಮೇಲೆ ಅವನೊಂದಿಗೆ ಆಟವಾಡಲು ಸಾಧ್ಯವಿಲ್ಲ ಎಂದು ಅವನಿಗೆ ಹೇಳಿದರು, ಏಕೆ ಹೀಗೆಂದರೆ, ಮಾರ್ಟಿನ್ ಕಪ್ಪು ಬಣ್ಣದವನಾಗಿದ್ದ ಮತ್ತು ಅವರು ಬಿಳಿಯವರಾಗಿದ್ದರು.



ಮಾರ್ಟಿನ್ ಮನೆಗೆ ಹೋಗಿ ಅಳುತ್ತಾನೆ. ಜನರು ಚರ್ಮದ ಬಣ್ಣದ ಬಗ್ಗೆ ಏಕೆ ಕಾಳಜಿ ವಹಿಸುತ್ತಾರೆಂದು ಅವನಿಗೆ ಅರ್ಥವಾಗಲಿಲ್ಲ .

ಮಾರ್ಟಿನ್‌ನ ತಾಯಿ ಮತ್ತು ಅಜ್ಜಿ ಅವನಿಗೆ ದ್ವೇಷ ಮತ್ತು ಪೂರ್ವಗ್ರಹದ [ಪ್ರೆಜುಡೀಸ್] ಬಗ್ಗೆ ತಿಳುವಳಿಕೆ ನೀಡಿದರು. ಮಾರ್ಟಿನ್ ಇತರ ಮಕ್ಕಳಂತೆಯೇ ಒಳ್ಳೆಯವನು ಎಂದು ಅವರು ಅವನಿಗೆ ಹೇಳಿದರು.

ಮಾರ್ಟಿನ್ ಭವಿಷ್ಯದಲ್ಲಿ ಹೇಳಿದುಂಟು, ಅವರು ಅವನಿಗೆ "ಆತ್ಮಗೌರವ“ ದ ಬಗ್ಗೆಯೂ ಕಲಿಸಿದರು ಎಂದು .

somebodiness- ಪ್ರತಿಯೊಬ್ಬ ವ್ಯಕ್ತಿಯಲ್ಲೂ ತಮ್ಮದೇಆದ ಸ್ವಯಂ - ಮೌಲ್ಯ ವಿರುತ್ತದೆ ಎಂಬುದನ್ನು ಅವರು ತಿಳಿಸಿದರು.



2. ಮಾರ್ಟಿನ್ ಅವರ ತಂದೆ

ಕಾನೂನು ನನ್ನನು ಹಿಂದಿನ ಸೀಟಿನಲ್ಲಿ ಸವಾರಿ ಮಾಡಲು ಆಗ್ರಹಿಸಿದರು ಸಾಹಾ ನನ್ನ ಆಲೋಚನೆ ಯಾವಾಗಲು ಮುನ್ನಡೆಯುತಿರುತ್ತದೆ.



ಮಾರ್ಟಿನ್ ಅವರ ತಂದೆ ಹೆಮ್ಮೆಯ ವ್ಯಕ್ತಿಯಾಗಿದ್ದರು. ಮಾರ್ಟಿನ್ ಅವರ ತಂದೆ ಬಿಳಿಯ ಅಮೆರಿಕನ್ ಅವರುಗಳು ಆಫ್ರಿಕನ್ - ಅಮೆರಿಕನ್ನರೊಂಧಿಗೆ ವರ್ತಿಸಿದ ರೀತಿಯಿಂದ ದುಃಖಿಯಾಗಿದ್ದರು.

ಒಮ್ಮೆ ಮಾರ್ಟಿನ್ ತನ್ನ ತಂದೆಯೊಂದಿಗೆ ಶೂಗಳನ್ನು ಖರೀದಿಸಲು ಹೋದನು.

ಅಲ್ಲಿನ ಗುಮಾಸ್ತನು ಅವರನ್ನು ಅಂಗಡಿಯ ಹಿಂದುಗಡೆ ಕಾಯಲು ಹೇಳಿದನು.

ಆದರೆ ಮಾರ್ಟಿನ್ ಅವರ ತಂದೆ ಅದನ್ನು ನಿರಾಕರಿಸಿದರು.

ಅವರು ಹೇಳಿದರು, "ನಾನು ಮುಂಭಾಗದಲ್ಲಿ ಶೂ ಖರೀದಿಸುತ್ತೇನೆ, ಇಲ್ಲದಿದ್ದರೆ ನಾನು ಖರೀದಿಸುವುದೇಯಿಲ್ಲ."

ಅವರಿಗೆ ಗುಮಾಸ್ತನ ಈ ವರ್ತನೆ ಇಷ್ಟವಾಗಲಿಲ್ಲ,

ಅವರು ಮಾರ್ಟಿನ್ ನ ಕೈ ಹಿಡಿದು ಅಂಗಡಿಯಿಂದ ಹೊರನಡೆದರು.



ಪ್ರತಿ ಭಾನುವಾರ, ಮಾರ್ಟಿನ್ ತನ್ನ ತಂದೆಯ ಉಪನ್ಯಾಸವನ್ನು ಚರ್ಚಿನಲ್ಲಿ ಕೇಳುತ್ತಿದ್ದನು

ಅವನ ತಂದೆಯ ಮಾತುಗಳು ಮತ್ತು ಆಲೋಚನೆಗಳು ಜನರನ್ನು ಮಂತ್ರಮುಗ್ಧಗೊಳಿಸುತ್ತಿದ್ದವು.

ಅದನ್ನು ನೋಡಿ ಮಾರ್ಟಿನ್ ತನ್ನ ತಾಯಿಗೆ ಹೇಳುತ್ತಾನೆ, "ನಾನು ಕೂಡ ಹಿಗೆಯೇ ಮಾತನಾಡಲು ಕಲಿಯುತ್ತೇನೆ".





ಮಾರ್ಟಿನ್ ಬಹಳಷ್ಟು ಅಧ್ಯಯನ ಮಾಡಿದ.

ಅವನು ಒಳ್ಳೆಯ ವಿದ್ಯಾರ್ಥಿಯಾಗಿದ್ದನು.

ಹದಿನೈದನೇ ವಯಸ್ಸಿಲ್ಲೇ ಅವನು ಕಾಲೇಜಿನಲ್ಲಿ ಓದಲಾರಂಭಿಸಿದ.

ಮತ್ತು, ಅವನಿಗೆ ಹದಿನೆಂಟು ವರ್ಷ ತುಂಬುವ ಹೊತ್ತಿಗೆ, ಅವನು ಚರ್ಚ್‌ನಲ್ಲಿ ಪಾದ್ರಿಯಾಗಿದ್ದನು.

ಕಾಲೇಜು ಶಿಕ್ಷಣ ಮುಗಿದ ನಂತರ, ಮಾರ್ಟಿನ್ ಹೆಚ್ಚಿನ ಅಧ್ಯಯನಕ್ಕಾಗಿ ಬೋಸ್ಟನ್‌ಗೆ ಹೋದರು.

ಅಲ್ಲಿ ಅವರು ಕೊರೆಟ್ಟಾ ಸ್ಕಾಟ್‌ನ್ನು ಭೇಟಿಯಾದರು.

ಅವರು ಒಟ್ಟಿಗೆ ಸಿನಿಮಾ ಮತ್ತು ನಾಟಕಗಳಿಗೆ ಹೋಗಲು ಪ್ರಾರಂಭಿಸಿದರು.

ಅವರು ಊಟಕ್ಕಾಗಿ ರೆಸ್ಟೋರೆಂಟ್‌ಗಳಲ್ಲಿಯೂ ಭೇಟಿಯಾಗುತ್ತಿದ್ದರು.

ಅವರಿಬ್ಬರೂ

ಬಹಳ ಹೊತ್ತು ಮಾತನಾಡುತ್ತಿದ್ದರು, ಮಾತನಾಡುತಲೆಯಿದ್ದರು.

ಅವರಿಬ್ಬರ ನಡುವೆ

ಪ್ರೀತಿ ಹುಟ್ಟಿತು.





ಮಾರ್ಟಿನ್ ಲೂಥರ್ ಕಿಂಗ್ ಮತ್ತು ಕೊರೆಟ್ಟಾ ಸ್ಕಾಟ್ ಜೂನ್ 1953 ರಲ್ಲಿ ವಿವಾಹವಾದರು.

1954 ರಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಅವರು ಅಲಬಾಮಾದ ಮಾಂಟ್ಗೊಮೆರಿಯಲ್ಲಿ ಅರ್ಚಕರಾಗಿ ನೇಮಕಗೊಂಡರು. ಮರುವರ್ಷ ೧೯೫೫ರಲ್ಲಿ ಅವರು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿ ಸ್ನಾತಕೋತ್ತರ [ಡಾಕ್ಟರೇಟ್] ಪದವಿಯನ್ನು ಪಡೆದರು. ಮಾರ್ಟಿನ್ ಲೂಥೆರ್ ಕಿಂಗ್ ಡಾ.ಕಿಂಗ್ ಆದರು.

3. ಮಾಂಟ್ಗೊಮೆರಿಯಲ್ಲಿ ಬಸ್ ಬಹಿಷ್ಕಾರ

೧ನೆ, ಡಿಸಂಬರ್, 1955 ರ ಗುರುವಾರ, ಅಲಬಾಮಾದ ಮಾಂಟ್ಗೊಮೆರಿಯಲ್ಲಿ ಬಸ್ ಚಾಲಕನೊಬ್ಬ ಬಿಳಿಯ ಪ್ರಯಾಣಿಕರಿಗೆ ಸ್ಥಳಾವಕಾಶ ಕಲ್ಪಿಸಲು ನಾಲ್ಕು ಕಪ್ಪು ಜನರನ್ನು ತಮ್ಮ ಆಸನಗಳನ್ನು ಬಿಟ್ಟುಕೊಡಲು ಹೇಳಿದನು.



ನಾಲ್ಕರಲ್ಲಿ ಮೂವರು ಎದ್ದರು, ಆದರೆ ಒಬ್ಬರು ಎದ್ದೇಳಲಿಲ್ಲ.

ರೋಸಾ ಪಾರ್ಕ್ಸ್ ತಮ್ಮ ಸೀಟಿನಲ್ಲಿಯೇ ಕುಳಿತಿದ್ದರು, ಅವರನ್ನು ಬಂಧಿಸಲಾಯಿತು.

ಡಿಸೆಂಬರ್ 5, 1955 ರ ಸೋಮವಾರದಂದು, ನ್ಯಾಯಾಧೀಶರು ರೋಸಾ ಪಾರ್ಕ್ಸ್ ಅವರು ಕಾನೂನನ್ನು ಉಲ್ಲಂಘಿಸಿದ್ದಾರೆ ಎಂದು ತೀರ್ಪು ನೀಡಿದರು.





ಡಾ. ಕಿಂಗ್ ಈ ಅನ್ಯಾಯದ
ಕಾನೂನಿನ ವಿರುದ್ಧ
ಪ್ರತಿಭಟನೆಯನ್ನು
ಪ್ರಾರಂಭಿಸಿದರು.

ಮಾಂಟ್ಗೊಮೆರಿಯಲ್ಲಿ ಆಫ್ರಿಕನ್-ಅಮೆರಿಕನ್ ಜನರು ಬಸ್ಸುಗಳಲ್ಲಿ ಪ್ರಯಾಣಿಸುವುದನ್ನು ನಿಲ್ಲಿಸಿದರು.

ಡಾ. ಕಿಂಗ್ ಬಹುತೇಕ ಸ್ಥಳಗಳಲ್ಲಿ ಈ ವಿಷಯದ ಬಗ್ಗೆ ಭಾಷಣವನ್ನು ನೀಡಿದರು.

ಡಾ. ಕಿಂಗ್ ಮಾಂಟ್ಗೊಮೆರಿ ಬಸ್ ಬಹಿಷ್ಕಾರದ ನೇತೃತ್ವವನ್ನು ವಹಿಸಿದರು .

ಜನರು ತುಂಬಾ ಕೋಪಗೊಂಡಿದ್ದರು.


ಅವರು ಹೋರಾಡಲು ಸಿದ್ಧವಾಗಿದ್ದರು.

ಅಗಾ, ಅದಕ್ಕೆ ಡಾ.ಕಿಂಗ್ ಅವರ ಉತ್ತರ,

"ನಾವು ದ್ವೇಷವನ್ನು ಪ್ರೀತಿಯಿಂದ ಗೆಲ್ಲಬೇಕು."

ಒಂದು ವರ್ಷಕ್ಕೂ ಹೆಚ್ಚು ಕಾಲ, ಮಾಂಟ್ಗೊಮೆರಿಯಲ್ಲಿ ಆಫ್ರಿಕನ್ - ಅಮೆರಿಕ್ ನ್ನರು ಬಸ್‌ಗಳನ್ನು ಹತ್ತಲಿಲ್ಲ .

ಅಮೆರಿಕಾದ ಸುಪ್ರೀಂ ಕೋರ್ಟ್ ಆಫ್ರಿಕನ್ - ಅಮೆರಿಕ್ ನ್ನರು ಬಿಳಿಯರಿಗೆ ತಮ್ಮ ಸೀಟುಗಳನ್ನು ಬಿಟ್ಟುಕೊಡುವಂತೆ ಒತ್ತಾಯಿಸುವುದು ಮತ್ತು ಅವರನ್ನು ಬಸ್‌ಗಳ ಹಿಂಭಾಗದಲ್ಲಿ ಕುಳಿತುಕೊಳ್ಳುವಂತೆ ಒತ್ತಾಯಿಸುವುದು ಅನ್ಯಾಯವಾಗಿದೆ ಎಂದು ತೀರ್ಪು ನೀಡಿತು.



ಮಾಂಟ್ಗೊಮೆರಿ ಬಸ್ ಬಹಿಷ್ಕಾರವು ಡಿಸೆಂಬರ್ 21, 1956 ರಂದು ಕೊನೆಗೊಂಡಿತು.


ಆ ದಿನ ಅಲಬಾಮಾದ ಮಾಂಟ್ಗೊಮೆರಿಯಲ್ಲಿ, ಡಾ. ಕಿಂಗ್ ಮತ್ತು ರೋಸಾ ಪಾರ್ಕ್ಸ್ ಸಾರ್ವಜನಿಕ ಬಸ್ಸಿನಲ್ಲಿ ಪ್ರಯಾಣಿಸಿದರು. ಅವರು ಬಸ್ಸಿನ ಮುಂಭಾಗದಲ್ಲಿ ಕುಳಿತಿದ್ದರು.



4. ಒಬ್ಬ ಶಕ್ತಿಶಾಲಿ ಶಾಂತಿಪ್ರಿಯ ಮಾನವ


ಡಾ. ಕಿಂಗ್ ಸಂಯುಕ್ತ ಅಮೆರಿಕದಲ್ಲಿ ಎಲ್ಲಾ ಜನರ ನಾಗರಿಕ ಹಕ್ಕುಗಳಿಗಾಗಿ ನಡೆದ ಹೋರಾಟದಲ್ಲಿ ಪ್ರಮುಖ ನಾಯಕರಾಗಿದ್ದರು.





ಈ ಹಕ್ಕುಗಳಿಗಾಗಿ "ಕುಳ್ಳಿತಲ್ಲೇ ಪ್ರತಿಭಟನೆ-ಧರಣಿಗಳೂ" ನಡೆದವು. ಬಿಳಿಯರಿಗೆ ಮೀಸಲಾದ ಊಟದ ಪ್ರದೇಶಗಳಲ್ಲಿ ಆಫ್ರಿಕನ್-ಅಮೆರಿಕನ್ನರು ಕುಳಿತು ಆಹಾರವನ್ನು ಬಡಿಸಬೇಕೆಂದು ಒತ್ತಾಯಿಸಿದರು.

"ಸ್ವತಂತ್ರ - ಸವಾರಿಗಳ್ಳನ್ನು" ಆಯೋಜಿಸಲಾಗಿತ್ತು.



ಆಗ ಒಂದು ಹೊಸಾ ಪ್ರವೃತ್ತಿ ಪ್ರಾರಂಭವಾಯಿತು.

ಕಪ್ಪು ಮತ್ತು ಬಿಳಿ "ಸ್ವಾತಂತ್ರ್ಯ ಸವಾರರು" ಬಸ್‌ಗಳಲ್ಲಿ ಒಟ್ಟಿಗೆ ಪ್ರಯಾಣಿಸಿದರು.

ಅವರು ಬಿಳಿಯರಿಗೆ ಮೀಸಲಾದ ಕಾಯುವ ಕೋಣೆಗಳಲ್ಲಿ ಒಟ್ಟಿಗೆ ಕುಳಿತರು. ಅವರು ಬಿಳಿಯರಿಗೆ ಮೀಸಲಾದ ಶೌಚಾಲಯಗಳನ್ನು ಸಹ ಬಳಸುತ್ತಿದ್ದರು.


ಸ್ವಾತಂತ್ರ್ಯಕ್ಕಾಗಿ
ನೂರಾರು
ಪ್ರತಿಭಟನೆಗಳು
ಮತ್ತು
ಪಾದಯಾತ್ರೆಗಳು
ನಡೆದವು



ಎಲ್ಲಕಿಂತ ದೊಡ್ಡ, ಅತಿದೊಡ್ಡ ಪಾದಯಾತ್ರೆ [ಮಾರ್ಚ್] ಆಗಸ್ಟ್ 1963ರಲ್ಲಿ ವಾಷಿಂಗ್ಟನ್‌ನಲ್ಲಿ ನಡೆಯಿತು. ಡಾ. ಕಿಂಗ್ ಲಿಂಕನ್ ಸ್ಮಾರಕದ ಮೆಟ್ಟಿಲ ಮೇಲೆ ನಿಂತು ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದರು.

"ನನಗೊಂದು ಕನಸು ಇದೆ," ಅವರು ಹೇಳಿದರು, "ಒಂದು ದಿನ ನಮ್ಮ ದೇಶದಲ್ಲಿ , ಜನರನ್ನು ಅವರ ಚರ್ಮದ ಬಣ್ಣದಿಂದ ಅಳೆಯುವುದರ, ಬದಲಾಗಿ ... ಅವರ ಸ್ವಭಾವವನ್ನು ನೋಡಿ ಅವರನ್ನು ಅಳೆಯಲಾಗುವುದು.”





ಎಲ್ಲಾ ಜನರ ನಾಗರಿಕ ಹಕ್ಕುಗಳಿಗಾಗಿ ಹೋರಾಟವನ್ನು ಡಾ. ಕಿಂಗ್ ಮುನ್ನಡೆಸಿದರು.

ಅವರು ಶಾಸಕರು ಮತ್ತು ಅಧ್ಯಕ್ಷರನ್ನು ಭೇಟಿಯಾದರು.

ಡಾ.ಕಿಂಗ್ ಶಾಂತಿಯುತ ಹೋರಾಟ ನಡೆಸಿದರು.

"ನಿನ್ನನ್ನು ಯಾರಾದರೂ ತಳ್ಳಿದರೆ," ಡಾ.ಕಿಂಗ್ ಹೇಳಿದರು, "ನೀನು ಅವರನ್ನು ತಳ್ಳಬೇಡ "

“ನಿನಗೆ ಯಾರಾದರೂ ಹೊಡೆದರೆ, ಪ್ರತಿದಾಳಿ ಮಾಡಬೇಡ."

ದ್ವೇಷವನ್ನು ಪ್ರೀತಿಯಿಂದ ಎದುರಿಸಲು ಅವರು ತಮ್ಮ ಅನುಯಾಯಿಗಳಿಗೆ ಕಲಿಸಿದರು .

ಡಾ. ಮಾರ್ಟಿನ್ ಪ್ರಬಲ ಶಾಂತಿಪ್ರಿಯರಾಗಿದ್ದರು.

ಅವರ ಉತ್ತಮ ಕಾರ್ಯಗಳಿಗಾಗಿ, ಡಾ. ಕಿಂಗ್ ಅವರಿಗೆ 1964 ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಯಿತು.

ಆದರೆ ನಿಸ್ಸಂದೇಹವಾಗಿ ಅವರು ಪಡೆದ ಅತ್ಯಂತ ದೊಡ್ಡ ಪ್ರಶಸ್ತಿ ಅವರ ಪ್ರಯತ್ನಗಳ ಮೂಲಕ ಅಂಗೀಕರಿಸಲ್ಪಟ್ಟ ಕಾನೂನುಗಳು.





ಅವುಗಳು ಯಾವುದೆಂದರೆ, 1964 ರ ಸಾಮಾಜಿಕ ಹಕ್ಕುಗಳ ಕಾಯ್ದೆ ಮತ್ತು 1965 ರ ಮತದಾನದ ಹಕ್ಕುಗಳ ಕಾಯ್ದೆ , ಈ ಕಾನೂನುಗಳು ಎಲ್ಲಾ ಧರ್ಮಗಳು ಮತ್ತು ಜಾತಿಗಳ ಜನರ ಹಕ್ಕುಗಳನ್ನು ರಕ್ಷಿಸುತ್ತದೆ.

5. ಅಂತಿಮವಾಗಿ ಸ್ವತಂತ್ರ

ಏಪ್ರಿಲ್ ೧೯೬೮ರಲ್ಲಿ ಡಾ.ಮಾರ್ಟಿನ್ ಮೆಂಫಿಸ್, ಟೆನ್ನೆಸ್ಸಿಗೆ ಹೋದರು .

ಅಲ್ಲಿ ಅವರು ಪಾದಯಾತ್ರೆ /ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದರು .

ಅವರು ಎಲ್ಲಾ ನೈರ್ಮಲ್ಯ ಕಾರ್ಮಿಕರಿಗೆ, ಬಿಳಿಯರು ಮತ್ತು ಕಪ್ಪು ಜನಾಂಗದವರಿಗೆ, ಸಮಾನ ಶ್ರಮಕ್ಕೆ ಸಮಾನ ವೇತನ ನೀಡಬೇಕೆಂದು ಬಯಸಿದ್ದರು.



ಪ್ರತಿಭಟನೆಯ ಹಿಂದಿನ ರಾತ್ರಿ ಅವರು ತಮ್ಮ ಹೋಟೆಲ್ ಹೊರಗೆ ನಿಂತಿದ್ದರು.

ಜೇಮ್ಸ್ ಅರ್ಲ್ ರೇ ಎಂಬ ವ್ಯಕ್ತಿ ಎದುರಿನ ಕಟ್ಟಡದ ಶೌಚಾಲಯದಲ್ಲಿ ಅಡಗಿಕೊಂಡಿದ್ದ. ಅವನು ತನ್ನ ರೈಫಲ್ ಅನ್ನು ಗುರಿಯಾಗಿಸಿಕೊಂಡು ಡಾ.ಕಿಂಗ್ ಮೇಲೆ ಗುಂಡು ಹಾರಿಸಿ ಅವರನ್ನು ಕೊಂದುಬಿಟ್ಟನು .



ಡಾ. ಕಿಂಗ್ ಅವರ ಪ್ರಕಾರ ಅವರ ಕನಸು - ದ್ವೇಷ, ಪೂರ್ವಗ್ರಹ ಮತ್ತು ಹಿಂಸೆಯಿಂದ ಮುಕ್ತವಾದ ಜಗತ್ತು.


ಅವರ ಸಮಾಧಿಯ ಮೇಲೆ "ಕೊನೆಗೂ ನಾನು ಸ್ವತಂತ್ರ"ಎಂದು ಬರೆಯಲಾಗಿದೆ.

ಅವರು ತಮ್ಮ ಪತ್ನಿ ಮತ್ತು ನಾಲ್ವರು ಮಕ್ಕಳನ್ನು ಅಗಲಿದರು .

ಡಾ.ಮಾರ್ಟಿನ್ ಅವರು ಅವರನ್ನು ಪ್ರೀತಿಸುವ ಮತ್ತು ಗೌರವಿಸುವ ಲಕ್ಷಾಂತರ ಕಣ್ಣೀರು ಸುರಿಸುತ್ತಿರುವ ಬಿಳಿ ಮತ್ತು ಕಪ್ಪು ಎರಡೂ ಜನಾಂಗದ ಅಮೆರಿಕನ್ನರನ್ನು ಬಿಟ್ಟು ಹೋದರು.



ಜನವರಿ ತಿಂಗಳ ಮೂರನೇ ಸೋಮವಾರವನ್ನು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ರಾಷ್ಟ್ರೀಯ ರಜಾದಿನವೆಂದು ಘೋಷಿಸಲಾಗಿದೆ. ಈ ದಿನ ಅಮೆರಿಕನ್ ನಿನ ಜನ ಶಕ್ತಿಶಾಲಿ ಶಾಂತಿಪ್ರಿಯ ಡಾ. ಮಾರ್ಟಿನ್ ಲೂಥರ್ ಕಿಂಗ್ ಅವರ ಜೀವನದ ಉತ್ಸವವನ್ನು ಕೊಂಡಾಡುತ್ತಾರೆ.



ಪ್ರಮುಖ ದಿನಾಂಕಗಳು

ಜನವರಿ 15 , 1929

ಮಾರ್ಟಿನ್ ಲೂಥರ್ ಕಿಂಗ್ ಜಾರ್ಜಿಯಾದ ಅಟ್ಲಾಂಟಾದಲ್ಲಿ ಜನಿಸಿದರು.

25 ಫೆಬ್ರುವರಿ 1948

ಮಾರ್ಟಿನ್ ಲೂಥರ್ ಕಿಂಗ್ ಅವರ ಪಾದ್ರಿ ನೇಮಕಾತಿ.

18 ಜೂನ್ 1953

ಮಾರ್ಟಿನ್ ಮತ್ತು ಕೊರೆಟ್ಟಾ ಸ್ಕಾಟ್‌ನ ಮದುವೆ.

೧೯೫೫–೫೬

ಡಾ. ಕಿಂಗ್ ಅವರಿಂದ ಮಾಂಟ್ಗೊಮೆರಿ ಬಸ್ ಬಹಿಷ್ಕಾರದ ನೇತೃತ್ವ ವಹಿಸಿದ್ದರು.

28 ಆಗಸ್ಟ್ 1963

ಡಾ. ಕಿಂಗ್ ಅವರ ಪ್ರಸಿದ್ಧ ವಾಷಿಂಗ್ಟನ್ ಉಪನ್ಯಾಸ, ಅದರಲ್ಲಿ ಅವರು "ನನಗೊಂದು ಕನಸು ಇದೆ" ಎಂದು ಹೇಳಿದರು.

೧೦ ಡಿಸೆಂಬರ್ ೧೯೬೪

ಡಾ. ಕಿಂಗ್ ನೊಬೆಲ್ ಪ್ರಶಸ್ತಿ ಪಡೆದರು.

ಏಪ್ರಿಲ್ 4 , 1968

ಜೇಮ್ಸ್ ಅರ್ಲ್ ರೇ ಅವರಿಂದ ಟೆನ್ನೆಸ್ಸೀಯಲ್ಲಿರುವ ಮೆಂಫಿಸ್‌ನಲ್ಲಿ ಡಾ. ಕಿಂಗ್ ಅವರ ಹತ್ಯೆ.

1986

ಮಾರ್ಟಿನ್ ಲೂಥರ್ ಕಿಂಗ್ ದಿನವನ್ನು ರಾಷ್ಟ್ರೀಯ ರಜಾದಿನವೆಂದು ಘೋಷಿಸುವುದು.